4) ಶ್ರೀಮತಿ ಶೋಭಾ ಕೆ. ಸಾವಂತ,
ಮರಾಠಿ ಶಿಕ್ಷಕಿ,
ಹಿ.ಪ್ರಾ. ಶಾಲೆ (ಮರಾಠಿ) ಹಣಕೋಣ, ಕಾರವಾರ.

5) ಶ್ರೀಮತಿ ಮಾನಾ ಕೆ. ಕುತ್ತಕರ
ಮರಾಠಿ ಶಿಕ್ಷಕಿ
ಕಿ.ಪ್ರಾ. ಶಾಲೆ, ಮರಾಠಿ ಶಾಲೆ,
ಪೋಟಗಾಳಿ, ಜೊಯಿಡಾ.

6) ಶ್ರೀಮತಿ ಇಂದಿರಾ ವಿಶ್ರಯ ದೇಸಾಯಿ
ಶಿಕ್ಷಕಿ, ಕಿ.ಪ್ರಾ. ಶಾಲೆ, (ಮರಾಠಿ), ಭಗತವಾಡ
ಕಾರವಾರ ಜಿಲ್ಲೆ.

7) ಶ್ರೀಮತಿ ಪೂರ್ಣಿಮಾ ಉ. ಭಟ್ಕಳ
ಹಿ.ಪ್ರಾ. ಶಾಲೆ, ಮರಾಠಿ ಶಾಲೆ,
ನಂದನಗುಡ್ಡ, ಕಾರವಾರ ತಾ:

8) ಶ್ರೀಮತಿ ಸರಸ್ವತಿ ಜ. ರಾಣೆ
ಸ.ಶಿ.ಕಿ.ಪ್ರಾ. ಶಾಲೆ,
ಗೋಟೆಗೋಳಿ, ಕಾರವಾರ ತಾ:

9) ಶ್ರೀಮತಿ ರಜಿಯಾ ರಾಯಾ ರಾಣೆ
ಸಹ ಶಿಕ್ಷಕರು, ಕಿ.ಪ್ರಾ. ಮರಾಠಿ ಶಾಲೆ,
ದೇವಳ, ಕಾರವಾರ ತಾ:

10) ಶ್ರೀಮತಿ ಶಶಿಕಲಾ ಎಸ್. ದೇಸಾಯಿ
ಮರಾಠಿ ಕಿ.ಪ್ರಾ. ಶಾಲೆ,
ಪಣಸೂಣ, ಜೊಯಿಡಾ.

11) ಶ್ರೀಮತಿ ಸರೋಜಿನಿ ಕುಬಲ
ಮರಾಠಿ ಶಿಕ್ಷಕಿ, ಹಿ.ಪ್ರಾ. ಶಾಲೆ,
ಹೋಟೇಗಾಳಿ ಕಾರವಾರ ತಾಲ್ಲೂಕು
ಉತ್ತರ ಕನ್ನಡ ಜಿಲ್ಲೆ.

ಮೈಸೂರು ನಗರದ ಕೆ.ಆರ್. ಆಸ್ಪತ್ರೆ ಚೆಲುವಾಂಬ ಆಸ್ಪತ್ರೆ ಪಿ.ಕೆ.ಟಿ.ಬಿ. ಆಸ್ಪತ್ರೆಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಬಗ್ಗೆ.

58(414) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡರು (ಚಾಮರಾಜ್) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರದ ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮತ್ತು ಪಿಕೆಟಿಬಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಾವುವು?

ಆ) ಅವುಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಡಾ: ಎಂ. ಶಂಕರನಾಯಕ್ (ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

ಅ) ಮೈಸೂರು ನಗರದ ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮತ್ತು ಪಿಕೆಟಿಬಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿವೆ.

	ಕೆ.ಆರ್. ಆಸ್ಪತ್ರೆ	ಚೆಲುವಾಂಬ ಆಸ್ಪತ್ರೆ	ಪಿಕೆಟಿಬಿ ಆಸ್ಪತ್ರೆ
ಸಹಾಯಕ ಪ್ರಾಧ್ಯಾಪಕರು (ಹೃದ್ರೋಗ)	1	—	—
ಸಹಾಯಕ ದಂತ ಚಿಕಿತ್ಸಕರು	1	—	—
ಶುಶ್ರೂಷಕಾಧೀಕ್ಷಕರು ದರ್ಜೆ-1	4	—	2
ಶುಶ್ರೂಷಕಾಧೀಕ್ಷಕರು ದರ್ಜೆ-2	1	1	—
ಹಿರಿಯ ಶುಶ್ರೂಷಕರು	7	6	4
ಶುಶ್ರೂಷಾಬೋಧಕರು	2	—	—
ಬೆರಳಚ್ಚುಗಾರರು	1	—	—
ಡೈಟಿಷಿಯನ್	1	—	—
ಫಿಜಿಯೋತೆರಪಿಸ್ಟ್	3	—	—
ವಿದ್ಯುತ್ ತಂತ್ರಜ್ಞರು	1	1	—
ಕಿರಿಯ ಪ್ರಯೋಗಶಾಲಾ ತಂತ್ರಜ್ಞರು	1	—	—
ಇಸಿಜಿ ಟೆಕ್ನಿಷಿಯನ್	1	—	—
ರಕ್ತನಿಧಿ ತಂತ್ರಜ್ಞ	1	—	—
ವಾಹನ ಚಾಲಕರು	2	—	—
ಹೆಲ್ತ್ ಇನ್‌ಸ್ಪೆಕ್ಟರ್	1	—	—
ಡಿ. ದರ್ಜೆ ನೌಕರರು	39	30	36
ಶುಶ್ರೂಷಕರು	—	1	1
ರೇಡಿಯೋಗ್ರಾಫರ್	—	—	1
ಕ್ಷ-ಕಿರಣ ತಂತ್ರಜ್ಞ	—	—	1

ಅ) ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಬರುವ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ನಿಟ್ಟಿನಲ್ಲಿ ವ್ಯಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರೂಪಿಸಲಾಗುತ್ತಿದ್ದು, ಈ ವ್ಯಂದ ಮತ್ತು ನೇಮಕಾತಿ ನಿಯಮಾವಳಿಯನ್ನು ರಚಿಸಿದ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.ಈ ಮಧ್ಯೆ ನಿರ್ದೇಶಕರು, ಆರೋಗ್ಯ ಮತ್ತು ಕುಕ. ಸೇವೆ ಇವರನ್ನು · ಕೋರಿದ್ದು ಸದರಿ ನಿರ್ದೇಶನಾಲಯವು ಗ್ರೂಪ್ 'ಸಿ' ಹುದ್ದೆಗಳು ಅರ್ಜಿ ಅಭ್ಯರ್ಥಿಗಳಿಂದ ಪದೋನ್ನತಿಯಿಂದ ಭರ್ತಿ ಮಾಡುತ್ತದೆ. ಈ ಪದೋನ್ನತಿಯಿಂದ ಖಾಲಿ ಬಿದ್ದ ಹುದ್ದೆಗಳಿಂದ ನೇರ ನೇಮಕಾತಿಯಿಂದ ಕಾಲಕಾಲಕ್ಕೆ ಭರ್ತಿ ಮಾಡಲು ಕ್ರಮ ಜರುಗಿಸುವುದು. ಖಾಲಿ ಇರುವ ಗ್ರೂಪ್ 'ಡಿ' ದರ್ಜೆ ನೌಕರರ ಹುದ್ದೆಗಳನ್ನು ಭರ್ತಿ ಮಾಡುವ ಬದಲಾಗಿ ಆಸ್ಪತ್ರೆಯ ನೈರ್ಮಲ್ಯತೆ ಮತ್ತು ಭದ್ರತಾ ಸಿಬ್ಬಂದಿಯ ಕೆಲಸಗಳನ್ನು ಗುತ್ತಿಗೆಯಾಧರದ ಮೇಲೆ ಖಾಸಗೀ ಸಂಸ್ಥೆಗಳಿಗೆ ವಹಿಸಲು ಸರ್ಕಾರವು ಆದೇಶವನ್ನು ಬಿಡುಗಡೆ ಮಾಡಲಾಗಿದೆ.

ವೈದ್ಯಕೀಯ ಕಾಲೇಜುಗಳ ಬೋಧಕ ಸಿಬ್ಬಂದಿ ಕೊರತೆ.

59(415) **ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :**—ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವೈದ್ಯಕೀಯ ಕಾಲೇಜುಗಳಿಗೆ ಬೋಧಕ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬೋಧಕ ಸಿಬ್ಬಂದಿಯ ನೇಮಕಾತಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಇ) ಗ್ರಾಮೀಣ ಆಸ್ಪತ್ರೆಗಳ ವೈದ್ಯರುಗಳ ನೇಮಕಾತಿಯ ನಿಯಮಗಳನ್ವಯ ವೈದ್ಯಕೀಯ ಕಾಲೇಜಿನ ಬೋಧಕ ಸಿಬ್ಬಂದಿಯನ್ನು ಸಹ ನೇಮಕಾತಿ ಮಾಡಲಾಗುವುದೇ?

ಡಾ : ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

ಅ) ಹೌದು

ಆ) ವ್ಯಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಖಾಲಿ ಇರುವ